1) ಪಠ್ಯ ಪುಸ್ತಕಗಳನ್ನು ಮುದ್ರಿಸಲಾಗಿದ್ದು, ಪ್ರತಿ ವರ್ಷವೂ ಒದಗಿಸಲಾಗುತ್ತಿದೆ.

2) ಪಠ್ಯ ಪುಸ್ತಕಗಳನ್ನು ಮುದ್ರಿಸಲಾಗಿದ್ದು ಪ್ರತಿ ವರ್ಷವೂ ಒದಗಿಸಲಾಗುತ್ತಿದೆ. ಆದರೂ ಸಹ ಕಡಿಮೆಯಾಗಿ ಒದಗಿಸಿರುವಿಕೆ ಹಾಗೂ ವಿಳಂಬದ ಬಗ್ಗೆ ಕೆಲವು ದೂರುಗಳು ಕಳೆದ ಎರಡು ಮೂರು ವರ್ಷಗಳಲ್ಲಿ ಬಂದಿವೆ. ಪಠ್ಯ ಪುಸ್ತಕಗಳ ಮುದ್ರಣ ಮತ್ತು ಹಂಚಿಕೆ ಕಾರ್ಯವನ್ನು ಪರಿಪೂರ್ಣವಾಗಿ ನಿರ್ವಹಿಸಲು ಒಂದು ಸ್ವಾಯತ್ತತೆ ಹೊಂದಿದ ಸಹಕಾರಿ ಸಂಘವನ್ನು ಸ್ಥಾಪಿಸಲು ನಿರ್ಧಾರವನ್ನು ಕೈಗೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಇದಾದರೆ ಇನ್ನು ಮುಂದೆ ಈ ನ್ಯೂನತೆಯು ಸರಿಹೋಗುತ್ತದೆ.

ಡೀಸೆಲ್ ಅಭಾವದಿಂದ ಓಡಿಸದಿರುವ ವಾಹನಗಳ ಸಂಖ್ಯೆ

1643 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡೀಸಲ್ ಅಭಾವದಿಂದ ಓಡಿಸದಿರುವ ರಸ್ತೆ ಸಾರಿಗೆ ಬಸ್‌ಗಳ ಸಂಖ್ಯೆ ಎಷ್ಟು?

ಆ) ಕೆಟ್ಟು ನಿಂತಿರುವ ಬಸ್‌ಗಳ ಸಂಖ್ಯೆ ಎಷ್ಟು?

ಇ) ಹಾಲಿ ಓಡಾಡುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು?

ಈ) ಹೊಸದಾಗಿ ಖರೀದಿ ಮಾಡಲಿರುವ ಬಸ್‌ಗಳ ಸಂಖ್ಯೆ ಎಷ್ಟು?

ಉ) ರಾಜ್ಯದಲ್ಲಿರುವ ಸಾರಿಗೆ ಡಿಪೋಗಳೆಷ್ಟು?

ಊ) ಚಾಮರಾಜನಗರಕ್ಕೆ ಒಂದು ಸಾರಿಗೆ ಡಿಪೋ ಅನ್ನು ಸರ್ಕಾರ ಕೊಡಲು ನಿರ್ಧರಿಸಿದೆಯೇ?

ಶ್ರೀ ಅಜೀಜ್ ಸೇಠ್, (ಸಾರಿಗೆ ಸಚಿವರು)

ಅ) 1227 ಅನುಸೂಚಿಗಳನ್ನು ಕಡಿತಗೊಳಿಸಲಾಗಿತ್ತು.

ಆ) 272 ವಾಹನಗಳಿದ್ದವು.

ಇ) ಸದ್ಯಕ್ಕೆ 7472 ಅನುಸೂಚಿಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಾರ್ಯಚರಣೆ ಮಾಡುತ್ತಿದೆ.

ಈ) 1990-91ನೇ ವರ್ಷಕ್ಕೆ ರೂಪಿಸಲಾದ ಕಾರ್ಯಯೋಜನೆಯ ಪ್ರಕಾರ ವಿವಿಧ ಮಾದರಿಯ 850 ಹೊಸ ವಾಹನಗಳನ್ನು ಸೇರ್ಪಡೆ ಮಾಡಲು ನಿರ್ಧರಿಸಲಾಗಿದೆ.

ಉ) 91 ಘಟಕಗಳಿವೆ

ಊ) ಸದ್ಯಕ್ಕೆ ಈ ಪ್ರಸ್ತಾವನೆ ಇರುವುದಿಲ್ಲ.

ಕರ್ನಾಟಕದಲ್ಲಿರುವ ತಾಂತ್ರಿಕ ಕಾಲೇಜುಗಳ ಸಂಖ್ಯೆ

1644 - ಶ್ರೀ ವಾಟಾಳ್ ನಾಗರಾಜು (ಚಾಮರಾಜನಗರ) ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿರುವ ತಾಂತ್ರಿಕ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಇವುಗಳನ್ನು ನಡೆಸುತ್ತಿರುವವರು ಯಾರು ಯಾರು?

ಇ) ಯಾವ ಉದ್ದೇಶಗಳ ಸಲುವಾಗಿ ಈ ಕಾಲೇಜುಗಳನ್ನು ಪಡೆದಿದ್ದಾರೆ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು):

ಅ) 51

ಆ) ಪಟ್ಟಿ ಲಗತ್ತಿಸಿದೆ.

ಇ) ಇಂಜಿನಿಯರಿಂಗ್ ವಿದ್ಯಾಭ್ಯಾಸ ನೀಡುವ ಉದ್ದೇಶದಿಂದ ಸ್ಥಾಪಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಖಾಸಗಿಯವರು ನಡೆಸುತ್ತಿರುವ ಇಂಜನಿಯರಿಂಗ್‌ಕಾಲೇಜುಗಳ ವಿವರ

1. ಖಾಸಗಿ ಅನುದಾನಿತ ಕಾಲೇಜು

ಕ್ರ. ಸಂ.	ಕಾಲೇಜಿನ ಹೆಸರು		ಆಡಳಿತ ಮಂಡಳಿಯ ಹೆಸರು
1.	ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು		ಶ್ರೀ ವೈ. ರಾಮಚಂದ್ರ, ಅಧ್ಯಕ್ಷರು, ಬಿ.ಎಂ.ಎಸ್ ಎಜುಕೇಷನಲ್ ಟ್ರಸ್ಟ್, ಬೆಂಗಳೂರು - 560 019.
2.	ಬಿಎಂಎಸ್ (ಸಂಜೆ) ಇಂಜನಿಯರಿಂಗ್ ಕಾಲೇಜು, ಬೆಂಗಳೂರು		ಅದೇ
3.	ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್, ಮೈಸೂರು.		ಶ್ರೀ ಟಿ.ವಿ. ಕೃಷ್ಣರಾವ್, ಅಧ್ಯಕ್ಷರು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್, ಮೈಸೂರು-8.
4.	ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್, ಮೈಸೂರು		ಅದೇ
5.	ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜನಿಯರಿಂಗ್, ಮೈಸೂರು		ಶ್ರೀ ಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಮಹಾಸ್ವಾಮಿಗಳವರ ಶ್ರೀ ಸುತ್ತೂರು ಮಠ ರಾಮಾನುಜ ರೋಡ್, ಮೈಸೂರು-4
6.	ಪಿ.ಇಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್, ಮಂಡ್ಯ		ಶ್ರೀ ಚೌಡಯ್ಯ, ಅಧ್ಯಕ್ಷರು, ಪೀಪಲ್ಸ್ ಎಜುಕೇಶನ್ ಸೊಸೈಟಿ, ಮಂಡ್ಯ
7.	ಮಲ್ನಾಡು ಕಾಲೇಜು ಆಫ್ ಇಂಜಿನಿಯರಿಂಗ್, ಹಾಸನ		ಶ್ರೀಹಾರನಹಳ್ಳಿ ರಾಮಸ್ವಾಮಿ, ಅಧ್ಯಕ್ಷರು, ಮಲ್ನಾಡು ಟೆಕ್ನಿಕಲ್ ಎಜುಕೇಷನ್ ಸೊಸೈಟಿ, ಹಾಸನ - 573 201
8.	ಬಿ.ವಿ.ಬಿ. ಕಾಲೇಜ್ ಆಫ್ ಇಂಜಿನಿಯರಿಂಗ್, ಅಂಡ್ ಟೆಕ್ನಾಲಜಿ, ಹುಬ್ಬಳ್ಳಿ.		ಶ್ರೀ ಪ್ರಭಾಕರ, ಬಿ.ಕೋರೆ, ಅಧ್ಯಕ್ಷರು, ಕೆ.ಎಲ್.ಇ. ಸೊಸೈಟಿ, ಬೆಳಗಾಂ - 16
9.	ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ		ಶ್ರೀ ಎಚ್.ವಿ.ಸಾಸನೂರು, ಅಧ್ಯಕ್ಷರು, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ.

10.	ಪಿ.ಡಿ.ಎ ಇಂಜನಿಯರಿಂಗ್ ಕಾಲೇಜು, ಗುಲ್ಬರ್ಗಾ		ಡಾ॥ ಬಿ.ಜಿ.ಜವಲಿ ಅಧ್ಯಕ್ಷರು, ಹೆಚ್.ಕೆ.ಇ. ಎಜುಕೇಷನ್ ಸೊಸೈಟಿ, ಗುಲ್ಬರ್ಗಾ.
2.	**ಖಾಸಗಿ ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳು:**		
1.	ಎಂ.ಎಸ್.ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.		ಶ್ರೀ ಎಂ.ಎಸ್.ರಾಮಯ್ಯ, ಅಧ್ಯಕ್ಷರು, ಎಂ.ಎಸ್.ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮತ್ತಿಕೆರೆ, ಬೆಂಗಳೂರು.
2.	ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ ಬೆಂಗಳೂರು.		ಶ್ರೀ ಕೆ.ಎಂ. ಪಾಂಡುರಂಗಶೆಟ್ಟಿ, ಅಧ್ಯಕ್ಷರು, ಆರ್.ಎಸ್.ಎಸ್. ಜಯನಗರ, ಬೆಂಗಳೂರು.
3.	ದಯಾನಂದ ಸಾಗರ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು		ಡಾ॥ ಹೇಮಚಂದ್ರ ಸಾಗರ್, ಅಧ್ಯಕ್ಷರು ದಯಾನಂದ ಸಾಗರ್ ಕಾಲೇಜು ಆಫ್ ಇಂಜನಿಯರಿಂಗ್, ಕನಕಪುರ ರಸ್ತೆ, ಬೆಂಗಳೂರು.
4.	ಬೆಂಗಳೂರು ಇನ್ಸ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಬೆಂಗಳೂರು.		ಶ್ರೀ ಕೆ.ಬಿ.ಬಸವಯ್ಯ, ಅಧ್ಯಕ್ಷರು, ಒಕ್ಕಲಿಗರ ಸಂಘ, ವಿಶ್ವೇಶ್ವರಪುರಂ, ಬೆಂಗಳೂರು.
5.	ಇಸ್ಲಾಮಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.		ಶ್ರೀ ಅಬ್ದುಲ್ ಷರೀಫ್, ಅಧ್ಯಕ್ಷರು, ಇಸ್ಲಾಮಿಯಾ ಇನ್ಸಿಟ್ಯೂಟ್ ಆಫ್ ಇಂಡಿಯಾ, ಬನ್ನೇರುಘಟ್ಟ ರೋಡ್, ಬೆಂಗಳೂರು-76.
6.	ಡಾ.ಅಂಬೇಡ್ಕರ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು		ಶ್ರೀ ಎಂ.ಹೆಚ್. ಜೈ ಪ್ರಕಾಶ್ ನಾರಾಯಣ್, ಕಾರ್ಯದರ್ಶಿ, ಘಾಂಚಜನ್ಯ ವಿದ್ಯಾಪೀಠ, ರಾಜಾಜಿನಗರ, ಬೆಂಗಳೂರು.
7.	ಗೌಸಿಯಾ ಕಾಲೇಜ್ ಆಫ್ ಇಂಜನಿಯರಿಂಗ್, ಬೆಂಗಳೂರು		ಡಾ॥ ಮಮ್ತಾಜ್ ಅಹಮದ್ ಖಾನ್, ಅಧ್ಯಕ್ಷರು ಗೌಸಿಯಾ ಇಂಜಿನಿಯರಿಂಗ್ ಅಂಡ್ ಇಂಡಸ್ಟ್ರಿಯಲ್ ಟ್ರಸ್ಟ್, ಬೆಂಗಳೂರು.
8.	ಸರ್.ಎಂ.ವಿ.ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು		ಶ್ರೀ ಎಲ್.ಕೆ. ಕುಪ್ಪರಾಜು. ಕಾರ್ಯದರ್ಶಿ, ಶ್ರೀ ಕೃಷ್ಣದೇವರಾಯ ಎಜುಕೇಶನ್ ಟ್ರಸ್ಟ್, ಬೆಂಗಳೂರು
9.	ಎಂ.ವಿ.ಜೆ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು		ಶ್ರೀ ಎಂ.ವಿ. ಜಯರಾಮ್, ಅಧ್ಯಕ್ಷರು, ವೆಂಕಟೇಶ್ ಎಜುಕೇಶನ್ ಸೊಸೈಟಿ, ಶಿವಾಜಿನಗರ, ಬೆಂಗಳೂರು-25

10.	ಕೆ.ಎಲ್.ಇ: ಸೊಸೈಟೀಸ್ ಇಂಜಿನಿಯರಿಂಗ್ ಕಾಲೇಜು, ಬೆಳಗಾಂ.		ಶ್ರೀ ವಿ.ಜೆ.ಬಡಕುಂದ್ರಿ, ಅಧ್ಯಕ್ಷರು, ಕರ್ನಾಟಕ ಲಿಬ್ರಲ್ ಸೊಸೈಟಿ, ಬೆಳಗಾಂ.
11.	ಕೆ.ಎಲ್.ಎಸ್.ಗೋಗ್ಟೆ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಗಾಂ.		ಅದೇ
12.	ವಿಜಯನಗರ ಇಂಜನಿಯರಿಂಗ್ ಕಾಲೇಜ್, ಬಳ್ಳಾರಿ.		ಶ್ರೀ ಕೆ.ಬಸವನಗೌಡ, ಆಡಳಿತಾಧಿಕಾರಿ, ವಿಜಯನಗರ ಇಂಜಿನಿಯರಿಂಗ್ ಕಾಲೇಜ್, ಬಳ್ಳಾರಿ.
13.	ಗುರುನಾನಕ್‌ದೇವ ಇಂಜಿನಿಯರಿಂಗ್ ಕಾಲೇಜ್, ಬೀದರ್		ಶ್ರೀ ಚಂದಾಸಿಂಗ್, ಅಧ್ಯಕ್ಷರು ಗುರುನಾನಕ್‌ದೇವ ಇಂಜಿನಿಯರಿಂಗ್ ಕಾಲೇಜ್, ಬೀದರ್.
14.	ರೂರಲ್ ಇಂಜಿನಿಯರಿಂಗ್ ಕಾಲೇಜ್, ಬಾಲ್ಕಿ		ಶ್ರೀ ಭೀಮಣ್ಣ ಖಂಡ್ರೆ; ಎಂ.ಎಲ್.ಸಿ. ಅಧ್ಯಕ್ಷರು, ಶಾಂತಿವರ್ಧಕ ಎಜುಕೇಶನ್ ಸೊಸೈಟಿ, ಬಾಲ್ಕಿ.
15.	ಬಿ.ಎಲ್.ಡಿ.ಇ.ಎಸ್. ಕಾಲೇಜ್ ಆಫ್ ಇಂಜನಿಯರಿಂಗ್ ಬಿಜಾಪುರ,		ಶ್ರೀ ಬಿ.ಆರ್.ಪಾಟೀಲ್ ಅಧ್ಯಕ್ಷರು, ಬಿ.ಎಲ್.ಡಿ.ಇ. ಅಸೋಸಿಯೋಷನ್ ಬಿಜಾಪುರ
16.	ಆದಿಚುಂಚನಗಿರಿ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಚಿಕ್ಕಮಗಳೂರು,		ಡಾ. ಬಾಲಗಂಗಾಧರ ಸ್ವಾಮೀಜಿ ಅಧ್ಯಕ್ಷರು, ಆದಿಚುಂಚುನಗಿರಿ ಎಜುಕೇಷನ್ ಟ್ರಸ್ಟ್ ನಾಗಮಂಗಲ, ಮಂಡ್ಯ.
17.	ಬಾಪೂಜಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ದಾವಣಗೆರೆ		ಶ್ರೀ ಶ್ಯಾಮನೂರು ಶಿವಶಂಕರಪ್ಪ ಕಾರ್ಯದರ್ಶಿ, ಬಾಪೂಜಿ ಎಜುಕೇಶನ್ ಸೊಸೈಟಿ, ದಾವಣಗೆರೆ
18.	ಜೆ.ಎಂ. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಚಿತ್ರದುರ್ಗ,		ಶ್ರೀ ಶ್ರೀ ಶ್ರೀ ಶಿವಮೂರ್ತಿ ಸ್ವಾಮಿಗಳವರು, ಅಧ್ಯಕ್ಷರು ಶ್ರೀ ತರಳಬಾಳು ಜಗದ್ಗುರು ಎಜುಕೇಷನ್ ಸೊಸೈಟಿ, ಚಿತ್ರದುರ್ಗ.
19.	ಮಣಿಪಾಲ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಣಿಪಾಲ.		ಡಾ॥ ರಮೇಶ್ ಪೈ ಅಧ್ಯಕ್ಷರು ಮಣಿಪಾಲ್ ಇನ್ಸ್‌ಟ್ಯೂಟ್ ಆಪ್ ಟೆಕ್ನಾಲಜಿ ಮಣಿಪಾಲ್.

20.	ನಿಟ್ಟೆ ಮಹಾಲಿಂಗ ಅಡ್ಯಂತಯ್ಯ ಮೆಮೋರಿಯಲ್ ಇನ್ಸ್‌ಟಿಟ್ಯೂಟ್ ಆಫ್ ನಿಟ್ಟೆ.		ಶ್ರೀ ಎಸ್ ವಿನಾಯಕ ಹೆಗ್ಗಡೆ, ಅಧ್ಯಕ್ಷರು, ನಿಟ್ಟೆ ಎಜುಕೇಷನ್ ಟ್ರಸ್ಟ್ ನಿಟ್ಟೆ.
21.	ಕುರಂಜಿ ವೆಂಕಟರಮಣ ಕಾಲೇಜ್ ಆಫ್ ಇಂಜನಿಯರಿಂಗ್, ಸೂಳ್ಯ,	ಶ್ರೀ ಕೆ.ಎಂ. ವೆಂಕಟರಮಣಗೌಡ ಅಧ್ಯಕ್ಷರು, ಅಕಾಡೆಮಿ ಆಫ್ ಲಿಬರಲ್ ಎಜುಕೇಶನ್ ಸೂಳ್ಯ.	
22.	ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ಆಫ್ ಇಂಜಿನಿಯರಿಂಗ್, ಧಾರವಾಡ		ಡಾ. ವೀರೇಂದ್ರ ಹೆಗ್ಗಡೆ, ಅಧ್ಯಕ್ಷರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನ್ ಟ್ರಸ್ಟ್, ಉಜಿರೆ.
23.	ಎಸ್.ಟಿ.ಜೆ.ಎಜುಕೇಶನ್ ಸೊಸೈಟೀಸ್ ಇಂಜನಿಯರಿಂಗ್ ಕಾಲೇಜ್, ರಾಣೆಬೆನ್ನೂರು.		ಶ್ರೀ ಶ್ರೀ ಶಿವಮೂರ್ತಿ ಸ್ವಾಮಿಗಳವರು ಅಧ್ಯಕ್ಷರು, ಎಸ್.ಟಿ.ಜೆ ಎಜುಕೇಶನ್ ಸೊಸೈಟಿ ಚಿತ್ರದುರ್ಗ.
24.	ರೂರಲ್ ಇಂಜನಿಯರಿಂಗ್ ಕಾಲೇಜು, ಹುಲಿಕೋಟೆ,		ಶ್ರೀ ಕೆ.ಹೆಚ್.ಪಾಟೀಲ್ ಅಧ್ಯಕ್ಷರು, ರೂರಲ್ ಟೆಕ್ನಿಕಲ್ ಎಜುಕೇಶನ್ ಸೊಸೈಟಿ, ಹುಲಿಕೋಟೆ.
25.	ಖಾಜಾ ಬಂದಾನವಾಜ್ ಕಾಲೇಜ್ ಆಫ್ ಇಂಜಿನಿಯರಿಂಗ್ ಗುಲ್ಬರ್ಗಾ		ಶ್ರೀ ಸೈಯದ್ ಶಾಹ ಮಹ್ಮದುಲ್ ಹುಸೇನ್ ಅಧ್ಯಕ್ಷರು, ಕೆ.ಬಿ.ಎನ್. ಕಾಲೇಜ್ ಆಪ್ ಇಂಜಿನಿಯರಿಂಗ್ ಗುಲ್ಬರ್ಗಾ.
26.	ಗೋಲ್ಡನ್ ವ್ಯಾಲಿ ಇನ್ಸ್‌ಟಿಟ್ಯೂಟ್ ಇಂಜಿನಿಯರಿಂಗ್ ಕೆ.ಜಿ.ಎಫ್.		ಡಾ॥ ಟಿ. ತಿಮ್ಮಯ್ಯ ಅಧ್ಯಕ್ಷರು, ಗೋಲ್ಡನ್ ವ್ಯಾಲಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕೆ.ಜಿ.ಎಫ್.
27.	ಜಗದ್ಗುರು ಚಂದ್ರಶೇಖರ್‌ನಾಥ ಸ್ವಾಮೀಜಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಚಿಕ್ಕಬಳ್ಳಾಪುರ.		ಶ್ರೀಶ್ರೀಶ್ರೀ ಬಾಲಗಂಗಾಧರ ಸ್ವಾಮಿಗಳವರು, ಅಧ್ಯಕ್ಷರು ಆದಿಚುಂಚುನಗಿರಿ ಎಜುಕೇಷನ್ ಸೊಸೈಟಿ, ನಾಗಮಂಗಲ, ಮಂಡ್ಯ.

28.	ಹೆಚ್.ಕೆ.ಇ. ಸೊಸೈಟೀಸ್ ಇಂಜನಿಯರಿಂಗ್ ಕಾಲೇಜ್ ಯರಮೆರಸ್ ಕ್ಯಾಂಪ್, ರಾಯಚೂರು		ಶ್ರೀ ಬಿ.ಜಿ. ಜವಳಿ ಅಧ್ಯಕ್ಷರು. ಹೆಚ್.ಕೆ.ಇ. ಎಜುಕೇಷನ್ ಸೊಸೈಟಿ, ಗುಲ್ಬರ್ಗಾ.
29.	ಜವಹರಲಾಲ್ ನೆಹರೂ ನ್ಯಾಷನಲ್ ಕಾಲೇಜ್ ಆಫ್ ಇಂಜಿನಿಯರಿಂಗ್, ಶಿವಮೊಗ್ಗ.		ಶ್ರೀ ಎಸ್. ನಾಗಪ್ಪಶೆಟ್ಟಿ, ಕಾರ್ಯದರ್ಶಿ ಆರ್. ನ್ಯಾಷನಲ್ ಎಜುಕೇಷನ್ ಸೊಸೈಟಿ, ಶಿವಮೊಗ್ಗ.
30.	ಸಿದ್ದಗಂಗಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು.		ಶ್ರೀಶ್ರೀಶ್ರೀ ಶಿವಕುಮಾರ ಸ್ವಾಮಿಗಳವರು, ಅಧ್ಯಕ್ಷರು, ಸಿದ್ದಗಂಗ ಎಜುಕೇಷನ್ ಸೊಸೈಟಿ, ತುಮಕೂರು.
31.	ಸಿದ್ದಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತುಮಕೂರು, (ಕಂಡೆನ್ಸ್‌ಡ್ ಕೋರ್ಸ್)		ಅದೇ
32.	ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು		ಶ್ರೀ ಕೆ.ಎಂ.ಗಂಗಾಧರಯ್ಯ, ಕಾರ್ಯದರ್ಶಿ. ಶ್ರೀ ಸಿದ್ಧಾರ್ಥ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು
33.	ಕಲ್ಪತರೂ ಇನ್ಸ್‌ಟಿಟ್ಯೂಟ್ ಆಪ್ ಟೆಕ್ನಾಲಜಿ, ತುಮಕೂರು		ಶ್ರೀ ಬಿ.ಎಂ. ಮಂಜುನಾಥ್ ಅಧ್ಯಕ್ಷರು, ಕಲ್ಪತರು ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ತಿಪಟೂರು.
34.	ಅಂಜುಮಾನ್ ಇಂಜನಿಯರಿಂಗ್ ಕಾಲೇಜ್, ಬಟ್ಕಳ		ಶ್ರೀ ಎಸ್.ಎಂ. ಯಹ್ಯಾ. ಅಧ್ಯಕ್ಷರು, ಅಂಜುಮಾನ್ ಇಂಜಿನಿಯರಿಂಗ್ ಭಟ್ಕಳ
35.	ಪಿ.ಇ.ಎಸ್. ಕಾಲೇಜ್ ಆಫ್ ಇಂಜಿನಿಯರಿಂಗ್ ಹನುಮಂತರನಗರ, ಬೆಂಗಳೂರು.		ಶ್ರೀ ದೊರಸ್ವಾಮಿ ನಾಯ್ಡು, ಅಧ್ಯಕ್ಷರು, ಪೀಪಲ್ಸ್ ಎಜುಕೇಷನ್ ಸೊಸೈಟಿ, ಬೆಂಗಳೂರು
36.	ಶ್ರೀ ಜಯಚಾಮರಾಜೇಂದ್ರ (ಸಂಜೆ) ಇಂಜನಿಯರಿಂಗ್ ಕಾಲೇಜು, ಮೈಸೂರು.		ಶ್ರೀಜಗದ್ಗುರು ಶ್ರೀಶ್ರೀಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಮಹಾಸ್ವಾಮಿಗಳವರ ಶ್ರೀ ಸುತ್ತೂರುಮಠ -ರಾಮ್ಮಾನುಜ ರೋಡ್, ಮೈಸೂರು.

3. ಸರ್ಕಾರಿ ಕಾಲೇಜುಗಳು.

1. ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್.

2. ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ.

3. ಎಸ್. ಕೆ. ಎಸ್. ಜೆ. ಟಿ. ಐ. ಬೆಂಗಳೂರು.

4. ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ (ಸಂಜ) ಬೆಂಗಳೂರು.

5. ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜು, ಸೂರತ್ಕಲ್.

ಧಾರವಾಡ ಜಿಲ್ಲಾ ಪರಿಷತ್‌ನವರು ಔಷಧಿ ಖರೀದಿಗಾಗಿ ಖರ್ಚು ಮಾಡಿರುವ ಹಣ.

1661 - ಶ್ರೀ ಮಂಜುನಾಥ್. ಸಿ. ಕುನ್ನೂರ್, (ಶಿಂಗಾವ) : ಮಾನ್ಯ ಆರೋಗ್ಯ ಮತ್ತು ಕುಟುಂಬ , ಕಲ್ಯಾಣ ಸೆಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಪರಿಷತ್‌ನಲ್ಲಿ ಆರೋಗ್ಯ ಸ್ಥಾಯಿ ಸಮಿತಿಯವರು ಔಷಧಿ ಖರೀದಿ ಹಾಗೂ ಇತರ ಸಾಮಗ್ರಿ ಖರೀದಿಗಾಗಿ 1989-90, 1990-91 ರಲ್ಲಿ ಎಷ್ಟು ಹಣ ಖರ್ಚು ಮಾಡಿರುವರು?

ಆ) ಸದರಿ ಖರೀದಿ ವ್ಯವಹಾರದಲ್ಲಿ ಜಿಲ್ಲಾ ಪರಿಷತ್ ನಿಂದಾಗಲಿ ಅಥವಾ ಸರ್ಕಾರದಿಂದ ಏನಾದರೂ ತನಿಕೆ ಆಗಿದೆಯೇ?

ಇ) ಹಾಗಿದ್ದಲ್ಲಿ ಈ ವರೆಗೆ ಏನು ಕ್ರಮ ಕೈಗೊಳ್ಳಲಾಗಿದೆ.

ಶ್ರೀಮತಿ ಕೆ.ಎಸ್.ನಾಗರತ್ನಮ್ಮ (ಆರೋಗ್ಯ ಸಚಿವರು) :

ಅ) 1989-90 ರೂ. 76,09,973-00

1991-91 ರೂ. 39,50,068-00

ಆ) ಆಗಿರುತ್ತದೆ.

ಇ) ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತುಗೊಳಿಸಿತ್ತು ಹಾಗೂ ಅಡಿಷನಲ್ ರಿಜಿಸ್ಟ್ರಾರ್ ವಿಚಾರಣೆ-2, ಲೋಕಾಯುಕ್ತ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದೆ. ವಿಚಾರಣೆ ನಡೆಯುತ್ತಿದೆ.

ಪಟ್ಟಣಗಳಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳಿಲ್ಲದಿರುವುದು.

1660 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ): ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಶಾಲಾ ಕಟ್ಟಡಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳುವಿರಿ?

ಇ) ಹಳ್ಳಿಗಳಲ್ಲಿಯ ಪ್ರಾಥಮಿಕ ಶಾಲೆಯ ಕಟ್ಟಡ ಹಾಗೂ ಪಟ್ಟಣಗಳಲ್ಲಿಯ ಪ್ರಾಥಮಿಕ ಶಾಲೆಯ ಕಟ್ಟಡಕ್ಕೆ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.